**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆ: 51/2017**

ದಿನಾಂಕ: 27.08.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 3 ಪ್ರಾಸಾ - 3

| | | |
|---|---|---|
| ಹೆಸರು | : | ಸಿದ್ದರಾಜು |
| ತಂದೆಯ/ಗಂಡನ ಹೆಸರು | : | ರೇಣುಕಯ್ಯ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ಸೆಕ್ಯೂರಿಟಿ |
| ವಾಸಸ್ಥಳ | : | ಕೆಂಪವಡೇರಹಳ್ಳಿ |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಈ ದಿವಸ ಸಾಕ್ಷಿ ನುಡಿದ ಪಿರ್ಯಾದಿ ಪ್ರೇಮ ನನಗೆ ಗೊತ್ತು. ಆಕೆಯ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿಯೇ ಇದೆ. ಅದೇ ರೀತಿ ಪ್ರಾಸಾ 2 ನರಸಿಂಹಮೂರ್ತಿ ಅಲಿಯಾಸ್ ತಮ್ಮಯ್ಯ ನನಗೆ ಗೊತ್ತು.

2. ಸುಮಾರು 1 ವರ್ಷ 8 ತಿಂಗಳ ಹಿಂದೆ ಎಪಿಎಂಸಿ ಚುನಾವಣೆ ಇತ್ತು. ನಾನು ನನ್ನ ಜಮೀನಿಗೆ ಹೋಗಿ ಪ್ರೇಮಾ ರವರ ಮನೆಯ ಮುಂದೆ ನನ್ನ ಮನೆಗೆ ಹೋಗುತ್ತಿದ್ದೆ. ಆಗ ಅವರ ಮನೆಯ ಮುಂದಿನ ರಸ್ತೆಯಲ್ಲಿ ಒಂದು ಸಿಲ್ವರ್ ಬಣ್ಣದ ಕ್ವಾಲೀಸ್ ವಾಹನ ಪಾಸ್ ಆಯಿತು.

3. ಆಗ ಪ್ರೇಮಾಳ ಮನೆಯಲ್ಲಿ ಆಕೆ ಬಾಯಿ ಬಡಿದುಕೊಳ್ಳುತ್ತಿದ್ದಳು. ನಾನು ಹೋಗಿ ಪ್ರೇಮಾಳನ್ನು ವಿಚಾರಿಸಿದಾಗ

ಯಾರೋ 3 ಜನರು ಬಂದು ಮನೆಯಲ್ಲಿ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಪ್ರೇಮಾ ನನಗೆ ತಿಳಿಸಿದರು.

4. ಪ್ರೇಮಾಳ ಬಾಯಿಗೆ ಬಟ್ಟೆ ಕಟ್ಟಿ ಕೈಕಾಲುಗಳನ್ನು ಪ್ಲಾಸ್ಟರ್‌ನಿಂದ ಕಟ್ಟಿ ಒಡವೆಗಳು ಮತ್ತು ದುಡ್ಡನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಪ್ರೇಮಾ ತಿಳಿಸಿದರು. ಆ ಕಾರಿನಲ್ಲಿ ಪ್ರಯಾಣಿಸಿದವರನ್ನು ನಾನು ಅಷ್ಟಾಗಿ ಗಮನಿಸಿಲ್ಲ.

5. ಘಟನೆ ನಡೆದ ಸುಮಾರು 1 ವರೆ - 2 ತಿಂಗಳ ನಂತರ ತಹಶೀಲ್ದಾರರು ನನಗೆ ನೋಟೀಸ್ ಕೊಟ್ಟು ರಾಮನಗರದ ಜೈಲಿಗೆ ಬರುವಂತೆ ಸೂಚನೆ ನೀಡಿದ್ದರು. ಅದರಂತೆ ನಾನು ರಾಮನಗರದ ಜೈಲಿಗೆ ಹೋಗಿದ್ದೇನೆ. ಅಲ್ಲಿ ನಾನು ಯಾರನ್ನೂ ಗುರುತಿಸಿಲ್ಲ.

6. ಸದರಿ ಕ್ವಾಲೀಸ್ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡಿದ್ದು ಆ ಕಾರಿನ ಫೋಟೋಗಳು. ಸದರಿ ಫೋಟೋಗಳನ್ನು ನಿಶಾನೆ ಪಿ 5 ಮತ್ತು 6 ಎಂದು ನಿಶಾನೆ ಮಾಡಲಾಯಿತು.

**<u>ಪಾಟೀಸವಾಲುಃ ಶ್ರೀ.ಹೆಚ್.ಎಸ್.ಆರ್. ವಕೀಲರಿಂದಃ 1 ನೇ ಆರೋಪಿ ಪರವಾಗಿಃ</u>**

7. ನನ್ನ ಊರು ಕೆಂಪವಡೇರಹಳ್ಳಿ. ನಾನು ಕಳೆದ 4-5 ತಿಂಗಳಿನಿಂದ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದೇನೆ. ಈ ಘಟನೆಗಿಂತ ಮುಂಚೆ ನಾನು ಕಾಲೇಜು ವಿದ್ಯಾಭ್ಯಾಸ ಮುಗಿಸಿ ಮನೆಯಲ್ಲಿ ಇದ್ದೆ. ನಮ್ಮ ಜಮೀನಿನಿಂದ ಪ್ರೇಮಾಳ ಮನೆಗೆ 100 ಮೀಟರ್ ದೂರ.

8. ಪ್ರೇಮಾ ರಸ್ತೆಯ ಬದಿಯಲ್ಲಿಯೇ ಮನೆ ಕಟ್ಟಿಕೊಂಡಿದ್ದಾರೆ ಎನ್ನುವುದು ಸರಿ. ಆ ಮನೆಯಿಂದ 10-20 ಅಡಿ ದೂರದಲ್ಲಿ ಬಸ್ ಸ್ಟಾಪ್ ಇದೆ ಎನ್ನುವುದು ಸರಿ. ಆ ಬಸ್ ಸ್ಟಾಪ್‌ನಲ್ಲಿ ರಾಮನಗರಕ್ಕೆ ಹೋಗಲು ಮತ್ತು ಮಾಗಡಿಗೆ ಹೋಗಲು ಜನ ಕುಳಿತಿರುತ್ತಾರೆ ಎನ್ನುವುದು ಸರಿ.

9. ಪ್ರೇಮಾಳ ಮನೆಯಲ್ಲಿ ಯಾವುದೇ ಘಟನೆ ನಡೆದರೆ ಆ ಬಸ್ ಸ್ಟಾಪ್‌ಗೆ ಕಾಣಿಸುತ್ತದೆ ಎನ್ನುವುದು ಸರಿ.

10. ಮನೆಗೆ ಬಂದ 3 ಜನರು ದುಡ್ಡು ಮತ್ತು ಒಡವೆಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಪ್ರೇಮಾ ನನಗೆ ತಿಳಿಸಿದ್ದಾರೆ. ನಾನು ಪ್ರೇಮಾಳ ಮನೆಗೆ ಹೋಗುವಾಗ ಅಲ್ಲಿ ಸುಮಾರು 4-5 ಜನ ಸೇರಿದ್ದರು. ಆರೋಪಿಗಳನ್ನು ಇವತ್ತೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎನ್ನುವುದು ಸರಿ.

11. ಪ್ರೇಮಾಳ ಮನೆಯಲ್ಲಿ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸುಳ್ಳು. ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಆರ್.ಎಸ್. ವಕೀಲರಿಂದಃ 2 ರಿಂದ 4 ನೇ ಆರೋಪಿ ಪರವಾಗಿಃ ಮೇಲಿನ ಪಾಟೀಸವಾಲನ್ನು ಅಡಾಪ್ಟ್ ಮಾಡಲು ಕೋರಿದ್ದಾರೆ. ಅನುಮತಿ ನೀಡಿದೆ.**

**<u>ಪಾಟೀಸವಾಲುಃ ಶ್ರೀ.ಎಸ್.ಎಂ. ವಕೀಲರಿಂದಃ 5 ರಿಂದ 7 ನೇ ಆರೋಪಿಗಳ ಪರವಾಗಿಃ ಇರುವುದಿಲ್ಲ.</u>**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.